# ನಮ್ಮ ಟೀವಿ ನೇರ ಪ್ರಸಾರ ಸಂದರ್ಶನ



**ನವೀನ್ ಶೆಟ್ಟಿ :** ನಮಸ್ಕಾರ. ಕರಾವಳಿ ಕರ್ನಾಟಕದ ಖಾಸಗಿವಲಯದ ಅತ್ಯಂತ ದೊಡ್ಡ ಕೇಬಲ್ ವಾಹಿನಿ ಎಂಬ ಹೆಗ್ಗಳಿಗೆಯನ್ನು ಹೊಂದಿರುವ ನಮ್ಮ ಟಿವಿ ಪ್ರಸ್ತುತ ಪಡಿಸುವ ವಿಶೇಷ ನೇರಪ್ರಸಾರದ ಕಾರ್ಯಕ್ರಮ ಕನ್ನಡ ದರ್ಶನ. ಈ ಕಾರ್ಯಕ್ರಮಕ್ಕೆ ತಮಗೆಲ್ಲರಿಗೂ ಪ್ರೀತಿಪೂರ್ವಕ ಸ್ವಾಗತ. ವೀಕ್ಷಕರೇ ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ, ಸಹ್ಯಾದ್ರಿಯು ಲೋಕದಲ್ಲಿನ ಉತ್ತುಂಗದ ನಿಲುಕಿನಲ್ಲಿ ನಿತ್ಯಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ ನಿತ್ಯೋತ್ಸವ ತಾಯಿ ನಿತ್ಯೋತ್ಸವ ಅಂತ ಪ್ರಕೃತಿ ತನ್ನ ಋತುಗಾನವನ್ನು ಹಾಡುತ್ತಿರುವಂತಹ ನಾಡು ನಮ್ಮದು.

ಶಿಲ್ಪಕಲೆಗಳ ತವರೂರು, ಗಂಧದ ಗುಡಿ ನಮ್ಮ ಕರ್ನಾಟಕ. ಕಾವೇರಿ ಗೋದೆಯರು ಮೈದೆಳೆಯುವ ನಮ್ಮ ನಾಡು ಕರ್ನಾಟಕ. ಪಂಪ ರನ್ನ ಪೊನ್ನ ಜನ್ನ ಕುಮಾರವ್ಯಾಸ, ಕುವೆಂಪು, ಕಾರಂತ, ಬೇಂದ್ರೆ, ಮಾಸ್ತಿ, ಡಿವಿಜಿ ಯುವರಂತಹ ಕವಿ ಶ್ರೇಷ್ಠರಿಂದ ಶ್ರೀಮಂತಗೊಂಡಂತಹ ಕಾವ್ಯ ಪರಂಪರೆಯನ್ನು ಹೊಂದಿರುವಂತಹ ನಾಡು ನಮ್ಮ ಕರ್ನಾಟಕ. ಇಂತಹ ಕರ್ನಾಟಕದ ಈ ಒಂದು ನಾಡು ನುಡಿ ಸಂಸ್ಕೃತಿಯ ವಿಸ್ತಾರತೆಯನ್ನು ಪ್ರಚಾರ ಪಡಿಸುವ ಮತ್ತು ಕನ್ನಡ ಕಸ್ತೂರಿಯ ಕಂಪನ್ನು ಸಾಗರದಾಚೆಯ ನಾಡಿನಲ್ಲಿ ಬೆಳಗುತ್ತಿರುವಂತಹ ನಮ್ಮ ಹೆಮ್ಮೆಯ ಕನ್ನಡಿಗರು ಅರ್ಥಾತ್ ಕುವೈತ್‌ನ ಕನ್ನಡಿಗರು ಪ್ರಸ್ತುತ ಪಡಿಸುವ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಕುರಿತಾದ ಈ ಒಂದು ವಿಶೇಷ ನೇರಪ್ರಸಾರದ ಕಾರ್ಯಕ್ರಮ ಕನ್ನಡ ದರ್ಶನ ಕಾರ್ಯಕ್ರಮಕ್ಕೆ ಮತ್ತೊಮ್ಮೆ ತಮ್ಮೆಲ್ಲರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತಾ, ಇಂದಿನ ಈ ಕಾರ್ಯಕ್ರಮದಲ್ಲಿ ನಮ್ಮ ಅತಿಥಿಗಳಾದ ಈ ಒಂದು ಸಮ್ಮೇಳನದ ಸಂಘಟನಾ ಸಮಿತಿಯ ಅದ್ಯಕ್ಷರಾಗಿರುವಂತಹ ಶ್ರೀಯುತ ಸುಧಾಕರ ಶೆಟ್ಟಿಯವರಿದ್ದಾರೆ. ವೃತ್ತಿಯಲ್ಲಿ ಎಲೆಕ್ಟ್ರಿಕಲ್ ಇಂಜಿನೀಯರ್ ಆಗಿದ್ದಾರೆ. ಕುವೈತ್‌ನ ಪ್ರತಿಷ್ಠಿತ ತೈಲ ಕಂಪೆನಿಯಾಗಿರುವಂತಹ ಕುವೈತ್ ಆಯಿಲ್ ಕಂಪೆನಿಯ Area Electricle Engineer ಆಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ತುಳು ಕೂಟ ಕುವೈತ್‌ನ ಸ್ಥಾಪಕ ಅಧ್ಯಕ್ಷರೂ, ಅದೇ ರೀತಿ ಕನ್ನಡ ಕೂಟ ಕುವೈತ್ ಇಲ್ಲಿನ ಪ್ರಸ್ತುತ ಅಧ್ಯಕ್ಷರಾಗಿ ಕೂಡ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಅದೇ ರೀತಿ ನನ್ನೊಂದಿಗೆ ಇರುವಂತಹ ಇನ್ನೋರ್ವ ಮುಖ್ಯ ಅತಿಥಿ ಶ್ರೀಯುತ ಕೆ.ಪಿ. ಮಂಜುನಾಥ್ ಸಾಗರ್ ಈ ಒಂದು ಸಮ್ಮೇಳನದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರು. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಪ್ರವೃತ್ತಿಯಲ್ಲಿ ಲೇಖಕರಾಗಿ, ಪತ್ರಕರ್ತರಾಗಿ, ವಿಶೇಷವಾಗಿ 1999 ರಲ್ಲಿ ತನ್ನದೇ ಆದ ಹೃದಯವಾಹಿನಿ ಎನ್ನುವಂತಹ ವಿಶಿಷ್ಠವಾದಂತಹ ಪತ್ರಿಕೆಯನ್ನು ಆರಂಭಿಸಿದ್ದಾರೆ. ಹಲವಾರು ರಾಷ್ಟ್ರ ಮಟ್ಟದ ಕನ್ನಡ ಸಮ್ಮೇಳನಗಳನ್ನು ನಡೆಸಿಕೊಟ್ಟಿದ್ದಾರೆ. ಅದೇ ರೀತಿ ಅಬುಧಾಬಿ, ಸಿಂಗಾಪುರ ಮತ್ತು ಬಹರೇನ್‌ನಲ್ಲಿ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನಗಳನ್ನು ನಡೆಸಿರುವಂತಹ ಕೀರ್ತಿಯನ್ನು ಕೂಡ ಹೊಂದಿದ್ದಾರೆ. ಹೊನ್ನ ಹನಿಗಳು, ಶ್ರವಣ ನಯನ ಮತ್ತು ಆತ್ಮಕವಿತೆಗಳು ಇವರ ಕೃತಿಗಳು. ಅದೇ ರೀತಿ ಸಾಕಷ್ಟು ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. 1999ರಲ್ಲಿ ಇಂಟರ್‌ನ್ಯಾಷನಲ್ ಮ್ಯಾನ್ ಆಫ್ ದ ಇಯರ್ ಇಂಗ್ಲೆಂಡ್‌ನಿಂದ, ಔಟ್‌ಸ್ಟ್ಯಾಂಡಿಂಗ್ ಯಂಗ್ ಪರ್ಸನ್ ಅವಾರ್ಡ್, ಸಾಧನ ಚೈತ್ರ ಪ್ರಶಸ್ತಿ ನೇಪಾಳದಿಂದ, ಸಮಾಜ ರತ್ನ ಪ್ರಶಸ್ತಿ, ಜ್ಞಾನ ಸರೋವರ ಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ ಅದೇ ರೀತಿ ಭಾರತ ಜ್ಯೋತಿ ಎಂಬಂತಹ ದೆಹಲಿಯಿಂದ ಕೊಡಮಾಡುವ ಪ್ರಶಸ್ತಿಯನ್ನು ಗಿಟ್ಟಿಸಿಕೊಂಡಿದ್ದಾರೆ. ಈ ಈರ್ವರು ಗಣ್ಯ ವ್ಯಕ್ತಿಗಳನ್ನು ನಿಮ್ಮೆಲ್ಲರ ಪರವಾಗಿ ಮತ್ತು ನಮ್ಮ ಟಿವಿಯ ಇಡೀ ಬಳಗದ ಪರವಾಗಿ ಪ್ರೀತಿ ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಪ್ರಿಯ ವೀಕ್ಷಕರೇ, ಇದು ನೇರ ಪ್ರಸಾರದ ಕಾರ್ಯಕ್ರಮ. ಕರೆ ಮಾಡಿ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಬಗ್ಗೆ ನಿಮ್ಮ ಪ್ರಶ್ನೆಗಳಿದ್ದಲ್ಲಿ ಅಥವಾ ಸಲಹೆಗಳಿದ್ದಲ್ಲಿ ಖಂಡಿತವಾಗಿಯೂ ಕರೆ ಮಾಡಿ. ನಿಮ್ಮ ಪ್ರಶ್ನೆಗಳಿಗೆ ಉತ್ತರ ನೀಡುವುದಕ್ಕಾಗಿ ನಮ್ಮ ಇಂದಿನ ಅತಿಥಿಗಳು ಕಾತರಿಸುತ್ತಿದ್ದಾರೆ.

2400827/2400924 ತಾವು ಕರೆ ಮಾಡಬೇಕಾದಂತಹ ದೂರವಾಣಿ ಸಂಖ್ಯೆಗಳು.

ಸರ್ ಪ್ರಥಮ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ. ಪ್ರಸ್ತುತ ಕುವೈತ್‌ನ ಕನ್ನಡ ಕೂಟದ ಅಧ್ಯಕ್ಷರಾಗಿದ್ದೀರಿ. ಈ ಕನ್ನಡ ಹೊರನಾಡಿನಲ್ಲಿ, ಹೊರದೇಶದಲ್ಲಿ ಯಾವ ರೀತಿ ಬೆಳಗುತ್ತಾ ಇದೆ? ವಿಶೇಷವಾಗಿ ಕನ್ನಡ ನಾಡಿನಲ್ಲಿ ನಮ್ಮಲ್ಲಿ ಕನ್ನಡಿಗರಿಗೆ ಕನ್ನಡದ ಮೇಲಿನ ಅಭಿಮಾನ್ಯ ಶೂನ್ಯವಾಗುತ್ತಿದೆ ಎನ್ನುವಂತಹ ದೂರುಗಳು ಕೇಳಿಬರುತ್ತಿವೆ. ಕನ್ನಡ ನಾಡಿನಲ್ಲಿ ಕನ್ನಡ ಮರೆಯಾಗುತ್ತಿದೆ. ಆದರೆ ದೂರದ ಕುವೈತ್‌ನಲ್ಲಿ ತಾವು ಕನ್ನಡವನ್ನು ಹೇಗೆ ಬೆಳಗುತ್ತೀರಿ......?

**ಸುಧಾಕರ್ ಶೆಟ್ಟಿ :** ದೂರದ ದೇಶದಲ್ಲಿರುವಾಗ, ಕನ್ನಡನಾಡಿನಿಂದ ದೂರ ಇರುವಾಗ ನಮಗೆ ಕನ್ನಡನಾಡಿನ ಪ್ರೀತಿ ಅದು ಉಕ್ಕೇರಿ ಬರುವುದು ಸ್ವಾಭಾವಿಕ. ನಾವು ನಮ್ಮ ಬಳಗದವರೆಲ್ಲಾ ಕನ್ನಡ ನಾಡಿನ ಶ್ರೇಷ್ಠವಾದ ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಗಳಿಂದ ವಂಚಿತರಾಗ ಬಾರದು ಎಂದು ನಾವು ಅತೀ ಪ್ರಯತ್ನ ಮಾಡಿ ಅಲ್ಲಿ ಬೇಕಾದ ನಮ್ಮ ಕನ್ನಡ ಸಾಹಿತ್ಯದ, ಕನ್ನಡ ಪರಂಪರೆಯ, ಕನ್ನಡ ಕಲೆಯ ವಿಷಯದಲ್ಲಿ ಆಗಾಗ ಕಾರ್ಯಕ್ರಮಗಳನ್ನು ಇಟ್ಟುಕೊಂಡು ನಾವು ಅವರಿಗೆ ನೆನಪುಮಾಡಿಕೊಂಡು, ಕುವೈತ್‌ನಲ್ಲಿ ಕನ್ನಡ ಇದೆ. ಕನ್ನಡ ರಾಜ್ಯದವರಿದ್ದಾರೆ. ಹಾಗೆಯೇ ಕನ್ನಡದ ಮೇಲಿನ ಅಭಿಮಾನವನ್ನು ವೃದ್ಧಿಮಾಡಿಕೊಂಡು ಬಂದಿದ್ದೇವೆ.

**ನವೀನ್ ಶೆಟ್ಟಿ :** ಸರ್, ತಮಗೆ ಒಂದು ಪ್ರಶ್ನೆ. ಹೃದಯವಾಹಿನಿ ಎನ್ನುವಂತಹ ಒಂದು ಮಾಸಿಕ ಪತ್ರಿಕೆಯನ್ನು ಆರಂಭಿಸಿದ್ದೀರಿ. ವೃತ್ತಿಯಲ್ಲಿ ಇಂಜಿನಿಯರ್ ಆದರೂ ಪ್ರವೃತ್ತಿಯಲ್ಲಿ ಸಾಹಿತಿಗಳು. ಹಾಗಾಗಿ ಈ ಗಡಿಯಾಚೆಯ ಕನ್ನಡಿಗರ ಬಗ್ಗೆ ಈ ವಿಶೇಷವಾದಂತಹ ಒಲವನ್ನು ಹೇಗೆ ಗಳಿಸಿಕೊಂಡಿರಿ ಮತ್ತು ಈ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನಗಳಲ್ಲಿ ತಮ್ಮನ್ನು ಯಾವ ರೀತಿ ತೊಡಗಿಸಿಕೊಂಡಿರಿ......?

**ಕೆ.ಪಿ. ಮಂಜುನಾಥ್ ಸಾಗರ್ :** ನಾನು ಪ್ರಥಮವಾಗಿ 2000ದಲ್ಲಿ ಹ್ಯೂಸ್ಟನ್‌ನಲ್ಲಿ ಅಕ್ಕ ಕನ್ನಡ ಸಮ್ಮೇಳನ ಜರುಗಿತ್ತು. ಅಲ್ಲಿಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಸರ್ಕಾರದಿಂದ ಬರೀ ಮೂವತ್ತು ಜನ ಕಲಾವಿದರನ್ನು ಕಳುಹಿಸಿಕೊಟ್ಟರು. ಆದರೆ ಅಮೇರಿಕಾ ಕನ್ನಡ ಸಮ್ಮೇಳನಕ್ಕೆ ಭಾಗವಹಿಸುವುದಕ್ಕಾಗಿ ಸುಮಾರು ಸಾವಿರಾರು ಜನ ನಿರೀಕ್ಷೆಯಲ್ಲಿದ್ದರು. ಆದರೆ ಅವರೆಲ್ಲಾ ಕೊನೆಗೆ ಈ ಮೂವತ್ತು ಜನ ಆಯ್ಕೆಯಾದಾಗ, ಉಳಿದವರು ನಿರಾಶರಾದರು. ಅಂತಹ ನಿರಾಶೆ ಹೊಂದಿದವರಿಗೆ ನಾನು ಪ್ರತ್ಯೇಕವಾಗಿ ವಿದೇಶದಲ್ಲಿ ಒಂದು ಸಮ್ಮೇಳನವನ್ನು ಯಾಕೆ ರೂಪಿಸಬಾರದು ಎಂಬ ಆಲೋಚನೆ ಬಂತು. ಆವಾಗ ನಾವು ಪ್ರಥಮ ಸಮ್ಮೇಳನಕ್ಕಾಗಿ ಅಬುಧಾಬಿ ಕನ್ನಡ ಸಂಘವನ್ನು ಸಂಪರ್ಕಿಸಿದೆವು. ಆಗ ಅಲ್ಲಿನ ಕನ್ನಡ ಸಂಘದ ಪೋಷಕರಾದ ಶ್ರೀ ಬಿ.ಆರ್. ಶೆಟ್ರು ಹಾಗೂ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಸರ್ವೋತ್ತಮ ಶೆಟ್ರು ಅದಕ್ಕೆ ಪೂರ್ವಕವಾಗಿ ಬೆಂಬಲ ನೀಡಿದರು. ಅದೇ ಪ್ರಕಾರ 2004 ರಲ್ಲಿ ಪ್ರಥಮ ಸಮ್ಮೇಳನವನ್ನು ಅಬುಧಾಬಿಯಲ್ಲಿ ನಡೆಸಲಾಯಿತು. ಅದು ತುಂಬಾ ಯಶಸ್ವಿಯಾಗಿ ಜರುಗಿತು. ಅದೂ ಕೂಡ ಪ್ರಥಮ ಸಮ್ಮೇಳನ ಆದುದರಿಂದ ಕರ್ನಾಟಕದಿಂದ ಸುಮಾರು ಐವತ್ತರಿಂದ ಅರವತ್ತು ಜನ ಕಲಾವಿದರು ಬಂದಿದ್ದರು. ಮುಂದೆ ಸಿಂಗಾಪುರಕ್ಕೆ ನಾವು ಹಮ್ಮಿಕೊಂಡಾಗ ಸುಮಾರು 100 ಜನ ಕಲಾವಿದರು ಭಾಗವಹಿಸಿದರು. ಅಲ್ಲಿಯ ಸಮ್ಮೇಳನ ಕೂಡ ತುಂಬಾ ಚೆನ್ನಾಗಿ ಜರುಗಿತು. ನಂತರ ಬಹರೇನ್‌ನಲ್ಲಿ ಕೂಡಾ ಅದ್ಭುತವಾಗಿ ಸಮ್ಮೇಳನವನ್ನು ನಡೆಸಿಕೊಟ್ಟರು. ಅಲ್ಲಿ ಸಮ್ಮೇಳನ ನಡೆದಾಗ ಭಾಗವಹಿಸಿದ ಕಲಾವಿದರ ಸಂಖ್ಯೆ 107. ಈ ಸಾರಿ ಕುವೈತ್‌ನ ಕನ್ನಡ ಸಂಘದವರ ಆಸಕ್ತಿ ಕೂಡ ಉತ್ತಮವಾಗಿದೆ. ಅವರು ಒಳ್ಳೆಯ ರೀತಿಯಲ್ಲಿ ವ್ಯವಸ್ಥೆ ಮಾಡ್ತಾ ಇದ್ದಾರೆ. ಈ ಸಮ್ಮೇಳನ ಕೂಡಾ ಅದ್ಭುತವಾಗಿ ಜರುಗುತ್ತದೆ ಮತ್ತು ಯಶಸ್ವಿಯಾಗುತ್ತದೆ ಎಂದು ನನಗೆ ಆಶಾವಾದ ಇದೆ. ಇದಕ್ಕೆ ಪೂರಕವಾಗಿ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿಯವರು ಕೂಡಾ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಇದ್ದಾರೆ.

**ನವೀನ್ ಶೆಟ್ಟಿ :** ಸರ್, ಹೃದಯವಾಹಿನಿ ಎನ್ನುವಂತಹ ಒಂದು ಮಾಸಿಕ ಪತ್ರಿಕೆಯ ಜೊತೆಯಲ್ಲಿ ಸೇರಿಕೊಂಡು ಅವರ ಸಹಯೋಗದೊಂದಿಗೆ ತಮ್ಮ ಕುವೈತ್ ಕನ್ನಡ ಕೂಟದ ಒಂದು ಬೃಹತ್ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವನ್ನು ಹಮ್ಮಿಕೊಂಡಿದ್ದೀರಿ. ಯಾವ ರೀತಿಯಾದಂತಹ ಒಂದು ರೂಪುರೇಷೆಗಳಿವೆ, ಯೋಜನೆಗಳಿವೆ ಸರ್....?

**ಸುಧಾಕರ್ ಶೆಟ್ಟಿ :** ಕನ್ನಡ ಕೂಟ ಈ ಯೋಜನೆಗಳನ್ನು ಮಾಡಿ ಕೊಂಡಾಗ ನಾವು ಅದಕ್ಕೆ ಪೂರಕವಾಗಿ ಇದಕ್ಕಿಂತ ಮೊದಲು ಹೇಗೆಲ್ಲಾ ನಡೆದಿದೆ, ಆ ಒಂದು ಪೂರ್ವ ಕಥೆಯನ್ನು ನಾವು ನೋಡಿಕೊಂಡು ಆ ಮೇಲೆ ಹೃದಯವಾಹಿನಿಯನ್ನು ನಾವು ಸಂಪರ್ಕಿಸಿದೆವು. ಮೊದಲಾಗಿ ನಮಗೆ ನಮ್ಮ ಆಲೋಚನೆ ಇದ್ದದ್ದೇನೆಂದರೆ ಗಲ್ಫ್ ಸಮ್ಮೇಳನ ಮಾಡುವುದು. ಕೊಲ್ಲಿ ರಾಷ್ಟ್ರಗಳಲ್ಲಿ ಎಷ್ಟುಮಂದಿ ಕನ್ನಡ ಸಂಘ ಇದೆ, ಅಲ್ಲಿಂದ ಎಲ್ಲರನ್ನು ಕರೆಸಿಕೊಂಡು ಅಲ್ಲಿ ಒಂದು ಕೂಟ ಮಾಡುವಂತಹ ಕನ್ನಡ ಸಮ್ಮೇಳನ ಮಾಡುವ ಆಲೋಚನೆ ಇತ್ತು. ಆದರೆ ಹೃದಯವಾಹಿನಿ ಯವರು ಬಹರೇನ್‌ನಲ್ಲಿ ದುಬ್ಯಾಯಲ್ಲಿ ಮಾಡಿದ ಕಾರ್ಯಕ್ರಮ ಎಲ್ಲಾ ಒಳ್ಳೆ ರೀತಿಯಲ್ಲಿ ನಡೆದುದರಿಂದ ನಮಗೂ ಕೂಡ ಹಾಗೇ ಎನಿಸಿತು. ಅವರೊಟ್ಟಿಗೆ ಸೇರಿ ನಾವು ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವನ್ನೇ ಮಾಡುವ ಅಂತ. ಆರೀತಿಯಲ್ಲಿ ಅದರ ಒಟ್ಟಿಗೆ ನಮ್ಮ ರಾಯಭಾರಿ ಕಛೇರಿಯಿಂದ ನಮ್ಮ ದೂತವಾಸದ ಗೌರವಾನ್ವಿತ ರಾಯಭಾರಿ ಗಣಪತಿಯವರು 60ನೇ ಸ್ವಾತಂತ್ರ್ಯೋತ್ಸವಕ್ಕೆ ಏನು ಮಾಡುತ್ತಾ ಇದ್ದೀರಾ...? ನೀವು ಕ್ರಿಕೆಟ್ ಮ್ಯಾಚ್ ಮಾಡುತ್ತೀರಾ? ಅಂತ ಕೇಳಿದರು. ಆಗ ನಾನು ಹೇಳಿದೆ ಕ್ರಿಕೆಟ್ ಮ್ಯಾಚ್ ಬೇಡ ನಾವು ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಅದಕ್ಕೆ ಅವರದ್ದು ಬೆಂಬಲ ಕೂಡಾ ಇದೆ. ಹಾಗಾಗಿ ಮುಂದುವರೆದಿದ್ದೇವೆ.

**ನವೀನ್ ಶೆಟ್ಟಿ :** ವೈಯಕ್ತಿಕವಾಗಿ ತಾವು ಒಬ್ಬ ಉತ್ತಮ ಕ್ರೀಡಾ ಪಟು ಕೂಡಾ ಹೌದು. ಅದೇ ರೀತಿ ಕ್ರಿಕೆಟ್ ಅಸೋಸಿಯೇಶನ್‌ನಲ್ಲಿ ಹಲವಾರು ರೀತಿಯ ಹುದ್ದೆಗಳನ್ನು ಅಲಂಕರಿಸಿದ್ದೀರಿ. ಆದರೂ ಕೂಡ ಈ ಒಂದು ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಈ ಒಂದು ಯೋಜನೆಗೆ ಮುನ್ನಡೆಯುತ್ತಿದ್ದೀರಿ...

ಬಹಳ ಧನ್ಯವಾದಗಳು ಸರ್.

ಈ ಒಂದು ಸಮ್ಮೇಳನದ ಓರ್ವ ಸಹಭಾಗಿಗಳು ತಾವು ಹೃದಯ ವಾಹಿನಿ ಸಂಪಾದಕರು, ತಮ್ಮ ರೂಪುರೇಷೆಗಳೇನು ಸರ್....?

ಮುಂದುವರಿಯುವುದು

MANJUNATH ASSOCIATES
CONSULTING ENGINEERS AND ARCHITECTS
Raghu Building,
IInd Floor, Urwa Stores
Mangalore - 575 006.
Ph : 2455209,
Mobile : 9343343239
E-mail : hrudayavahini@yahoo.co.in
K.P. Manjunath
Contact for
PLAN
ESTIMATE
VALUATION
SUPERVISION
CONSTRUCTION
SITES & READY BUILT HOUSE

Editor & Publisher : K.P. Manjunath, Manjunath Associates, Raghu Building, Urwa Store, Mangalore - 575 006. Printed at : Digantha Mudhrana, Yeyyadi, Mangalore.